ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದು ನನಗೆ ವೈಯಕ್ತಿಕ ಸಂಬಂಧವೇನೂ ಇಲ್ಲ. ರಾಜ್ಯದಲ್ಲಿ ರೈತರೆಲ್ಲಾ ಸಾಯುತ್ತಿದ್ದಾರೆ. ರೈತರ ಹೆಸರಿನ ಮೇಲೆ ನೀವು ಪ್ರಮಾಣವಚನ ಮಾಡುತ್ತೀರಿ, ಒಂದು ಕಡೆ ಗೋಲಿ ಹಾಕುತ್ತೀರಿ, ಏನು ನಡೆಯುತ್ತಿದೆ ಎಂದು ನಮಗೆ ಅರ್ಥವೇ ಆಗುವುದಿಲ್ಲ. ಗೋಲಿಬಾರ್ ಮಾಡುವುದೇ ಆದರೆ ಅದರ ಹೆಸರಿನಲ್ಲಿ ಏಕೆ ಪ್ರಮಾಣವಚನ ಸ್ವೀಕರಿಸಿದಿರಿ? ಅವರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಳ್ಳಬಾರದಾಗಿತ್ತು.

ಅಧ್ಯಕ್ಷರು : ಅದಕ್ಕಾಗಿ ನಾನು ಆಗಲೇ ಹೇಳಿದೆ ನಿಮಗೆ ಮುಂದಿನವಾರ ಅವಕಾಶ ಕೊಡುತ್ತೇನೆಂದರೆ ನೀವು ಅವಸರ ಮಾಡಿದಿರಿ, ಮಂತ್ರಿಗಳೂ ಅವಸರ ಮಾಡಿದರು. ಮುಂದಿನವಾರ ಅವಕಾಶ ಕೊಡುತ್ತೇನೆ. ಗೃಹ ಸಚಿವರೇ ಬಂದು ಉತ್ತರ ಕೊಡುತ್ತಾರೆ.

11-30 AM

(ಗೊಂದಲ)

ಅಧ್ಯಕ್ಷರು : ನಿಮಗೆ next week ಅವಕಾಶ ಕೊಡುತ್ತೇನೆಂದು ಅದಕ್ಕೇ ನಾನು ಹೇಳಿದ್ದು. ಆದರೆ ನೀವೇ ಅವಸರ ಮಾಡಿದಿರಿ. ಆದ್ದರಿಂದ ಮುಂದಿನ ವಾರ ಇದಕ್ಕೆ ಅವಕಾಶ ಕೊಡುತ್ತೇನೆ. ಗೃಹ ಸಚಿವರೇ ಬಂದು ಉತ್ತರವನ್ನು ಕೊಡುತ್ತಾರೆ.

ಶ್ರೀ ಆರ್. ರೋಷನ್‌ಬೇಗ್ : ನಾನು ಇಲ್ಲಿ ಗೃಹ ಸಚಿವರನ್ನು ನೋಡಲೇ ಇಲ್ಲ.

ಅಧ್ಯಕ್ಷರು : ಇಲ್ಲಾ, ಬಂದಿದ್ದಾರೆ. ಅವರು ವಿಧಾನ ಪರಿಷತ್ತಿಗೆ ಹೋಗಿದ್ದಾರೆ. ಅಲ್ಲಿ ಅವರು ಸಭಾನಾಯಕರು. ಇವತ್ತು ಅವರು ನನ್ನ ಅನುಮತಿ ತೆಗೆದುಕೊಂಡು ಹೋಗಿದ್ದಾರೆ. ಅನಂತರ ಬರುತ್ತಾರೆ.

ಕಾಡಾನೆ ಹಾವಳಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 9 : (57)

ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್. ಕೆ. (ಸಕಲೇಶಪುರ)

ಉತ್ತರಿಸುವವರು : ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಹಾಸನ ಜಿಲ್ಲೆ ಸಲಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಕಾಡಾನೆ ಹಾವಳಿಯು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.	ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿ ನಲ್ಲಿ ಆನೆ ಹಾವಳಿ ಸ್ವಲ್ಪಮಟ್ಟಿಗೆ ಹೆಚ್ಚಾಗಿದ್ದು, ಸಕಲೇಶಪುರ ದಲ್ಲಿ ಕಡಿಮೆಯಾಗಿರುತ್ತದೆ.

ಆ.	ಹಾಗಿದ್ದಲ್ಲಿ, ಅವುಗಳ ನಿಯಂತ್ರಣಕ್ಕೆ ಮತ್ತು ಸ್ಥಳಾಂತರಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು.	ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಯ ಅರಕಲಗೂಡು, ಯಸಳೂರು, ಆಲೂರು ಮತ್ತು ಸಕಲೇಶಪುರ ವಲಯಗಳಲ್ಲಿ ಮಾನವ ಜೀವಹಾನಿಗೆ ಹಾನಿಕರವಾದ 6 ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ ಮತ್ತು ಕಾಡಾನೆ ಹಾವಳಿಯನ್ನು ನಿಯಂತ್ರಿಸುವ ಸಲುವಾಗಿ ಆನೆ ತಡೆ ಶಿಬಿರಗಳನ್ನು ಸ್ಥಾಪಿಸಿ, ಪಟಾಕಿ, ಸಿಡಿಮದ್ದು, ಮುಂತಾದ ಸ್ಫೋಟಕ ವಸ್ತುಗಳನ್ನು ಉಪಯೋಗಿಸಿ ಕಾಡಾನೆಗಳನ್ನು ಕಾಡಿನೊಳಗೆ ಓಡಿಸುವ ಅಗತ್ಯ ಕ್ರಮ ಕೈಗೊಂಡಿದೆ. ಕಾಡಾನೆಗಳ ಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದಿಂದ ದಾಟಿ ಹೊರಬರದಂತೆ ಆನೆ ನಿರೋಧಕ ಕಂದಕಗಳನ್ನು ನಿರ್ಮಿಸಲಾಗಿದೆ.
ಇ.	ಕಾಡಾನೆಯ ಹಾವಳಿಯಿಂದ ಜೀವಹಾನಿ ಹಾಗೂ ಬೆಳೆ ಹಾನಿ ಉಂಟಾದ ರೈತರಿಗೆ ಪರಿಹಾರ ಬಾಕಿ ಇರುವುದು ನಿಜವೇ;	ಪ್ರಸಕ್ತ ಸಾಲಿನಲ್ಲಿ ಕಾಡಾನೆ ಹಾವಳಿಯಿಂದ ನಷ್ಟವಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸಲಾದ ಪರಿಹಾರ ಹಾಗೂ ಬಾಕಿ ಇರುವ ಪ್ರಕರಣಗಳ ವಿವರ ಕೆಳಗಿನಂತಿದೆ. ರೂ. ಲಕ್ಷಗಳಲ್ಲಿ.

ವಿವರ	ಪರಿಹಾರ ಪಾವತಿಸಿರುವುದು		ಪರಿಹಾರ ಬಾಕಿಯಿರುವುದು	
	ಪ್ರಕರಣ	ರೂ.	ಪ್ರಕರಣ	ರೂ.
ಬೆಳೆಹಾನಿ	439	6.79	2169	38.52
ಮಾನವ ಗಾಯ	3	0.16	12	01.02
ಜಾನುವಾರು ಹತ್ಯೆ	2	0.05	21	00.56
ಮಾನವ ಹತ್ಯೆ	2	3.00	--	--
ಒಟ್ಟು	446	10.00	2202	40.10

ಎಲ್ಲಾ ಮಾನವ ಜೀವಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಹಾರವನ್ನು ಪಾವತಿಸಲಾಗಿದ್ದು, ಬಾಕಿಯಿರುವ ಪ್ರಕರಣಗಳಲ್ಲಿ ರೈತರಿಗೆ ಪರಿಹಾರವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ.	ಜೀವಹಾನಿ ಹಾಗೂ ಬೆಳೆ ಹಾನಿ ಪರಿಹಾರದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಮಾನವ ಜೀವಹಾನಿ ಹಾಗೂ ಬೆಳೆಹಾನಿ ಪರಿಹಾರದ ಮೊತ್ತವನ್ನು ಹೆಚ್ಚಿಸುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ ಅಪಟೀ 52 ಎಫ್‌ಡಬ್ಲ್ಯುಎಲ್ 96 ದಿನಾಂಕ :12-02-2002 ರಲ್ಲಿನ ಧಯಾತ್ಮಕ ಧನದ ಮೊತ್ತವನ್ನು ಪರಿಷ್ಕರಿಸಿ ಸರ್ಕಾರವು 17-01-2007ರಲ್ಲಿ ಆದೇಶ ಹೊರಡಿಸಿದೆ. ಬೆಳೆಹಾನಿ ಪರಿಹಾರ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನಲ್ಲಿ ಆನೆ ಹಾವಳಿ ಸ್ವಲ್ಪಮಟ್ಟಿಗೆ ಹೆಚ್ಚಾಗಿದ್ದು, ಸಕಲೇಶಪುರದಲ್ಲಿ ಕಡಿಮೆಯಾಗಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಆಲೂರು ತಾಲ್ಲೂಕಿನಲ್ಲಿ ಸುಮಾರು 15 ಆನೆಗಳಿವೆ. ಸಕಲೇಶಪುರ ತಾಲ್ಲೂಕಿನ ಯಸಳೂರು ವಿಭಾಗದಲ್ಲಿ ಸುಮಾರು 24 ರಿಂದ 30 ಆನೆಗಳಿವೆ. ನಾವು ಆ ಭಾಗಕ್ಕೆ ಪ್ರವಾಸ ಹೋದಾಗ, ಅಲ್ಲಿ ಆನೆಗಳನ್ನು ಕಾಡಿಗೆ ಓಡಿಸುತ್ತಿದ್ದೇವೆಂಬ ಮಾತನ್ನು ಅವರು ಹೇಳುತ್ತಾರೆ. ಆದರೆ ಅಲ್ಲಿ ಕಾಡೇ ಉಳಿದಿಲ್ಲ. ಜೊತೆಗೆ ಅಲ್ಲಿರತಕ್ಕಂತಹ ಸುಮಾರು 25 ಆನೆಗಳಲ್ಲಿ ಎಲ್ಲವೂ ಕೂಡ ಊರಿನಲ್ಲಿಯೇ ಉಳಿದಿವೆ. ಅಲ್ಲಿನ ಜನರು ದಯಮಾಡಿ ಆನೆಗಳನ್ನು ಹಿಡಿಯಿರಿ ಒಂದು ವೇಳೆ ಆನೆಗಳನ್ನು ಹಿಡಿಯುವುದಕ್ಕೆ ಆಗದೇ ಹೋದರೆ ಕನಿಷ್ಠ ನಮ್ಮನ್ನಾದರೂ ಇಲ್ಲಿಂದ ಸ್ಥಳಾಂತರಿಸಿ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅಲ್ಲಿ ಹಾಕಿರುವಂತಹ ಬೆಳೆಗಳಿಗೆ ಸುಮಾರು 8-10 ವರ್ಷಗಳಿಂದ ಬೆಳೆ ಪರಿಹಾರ ಕೊಟ್ಟಿಲ್ಲ. ಸತ್ತವರಿಗೆ ಪರಿಹಾರ ಕೊಟ್ಟಿಲ್ಲ. ಒಬ್ಬ Permanent disability ಆಗಿದ್ದಾನೆ. ಅವನ spinal cord ಮೇಲೆ ಆನೆ ತುಳಿದು ಅವನು ಮೂರು ವರ್ಷದಿಂದ ಹಾಗೆಯೇ ಮಲಗಿದ್ದಾನೆ. ಆತನಿಗೆ ತಾವು ಕೇವಲ 25 ಸಾವಿರ ಪರಿಹಾರ ಕೊಟ್ಟಿದ್ದೀರಿ. ನೀವು 10 ಲಕ್ಷ ರೂಪಾಯಿ ಪರಿಹಾರ ಕೊಟ್ಟರೂ ಸಾಲದು. ಆ ಮನುಷ್ಯ ಉಳಿದಿರುವುದೇ ತಪ್ಪು. ಆತ ಸತ್ತು ಹೋಗಿದ್ದರೆ ಅವರ ಕುಟುಂಬದವರು ಎಷ್ಟೋ ನೆಮ್ಮದಿಯಾಗಿರುತ್ತಿದ್ದರು. ಈ ರೀತಿ ಪರಿಹಾರ ಕೊಟ್ಟರೆ ಹೇಗೆ? ದಯಮಾಡಿ ತಾವು ಆನೆಗಳನ್ನು ಸ್ಥಳಾಂತರಿಸಿ ಇಲ್ಲವಾದರೆ ಅಲ್ಲಿರತಕ್ಕಂತಹ 15-20 ಹಳ್ಳಿಯ ಜನರನ್ನು ಬೇರೆಡೆ ಸ್ಥಳಾಂತರಿಸಿ ಎಂದು ಅಲ್ಲಿ ಜನರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಸುಮಾರು 25 ಆನೆಗಳು ಯಸಳೂರು ಭಾಗದಲ್ಲಿದೆ. 15 ಆನೆಗಳು ಆಲೂರು ಭಾಗದಲ್ಲಿದೆ. ಆಲೂರಿನಲ್ಲಿ ಒಂದು ಮುತ್ತಿಗೆ ಎಂಬ ಗ್ರಾಮವಿದೆ. ಒಂದು ತಿಂಗಳ ಹಿಂದೆ ಒಬ್ಬ ಮಹಿಳೆ ನೀರು ತರುವುದಕ್ಕೆಂದು ಹೋದಾಗ ಆನೆ ತುಳಿದು ಅವಳು ಸತ್ತು ಹೋಗಿರುತ್ತಾಳೆ. ನೀರಿಗಾಗಿ ಹೇಮಾವತಿ ಸೇತುವೆಯಿಂದ ಸುಮಾರು 1 ಕಿಲೋ ಮೀಟರ್‌ನಷ್ಟು ದೂರ ಹೋಗಬೇಕು. ಅಲ್ಲಿ ಹಿನ್ನೀರು ಇದೆ. ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಇಂತಹ ಪರಿಸ್ಥಿತಿ ಅಲ್ಲಿದೆ. ದಯಮಾಡಿ ಸರ್ಕಾರ ಇವುಗಳನ್ನೆಲ್ಲಾ

ಗಮನಹರಿಸಬೇಕು. ತಾವೇ ಕೊಟ್ಟಿರುವಂತಹ ಮಾಹಿತಿ ಪ್ರಕಾರ ಸುಮಾರು 2,169 ಪ್ರಕರಣಗಳಲ್ಲಿ 40 ಲಕ್ಷ ರೂಪಾಯಿ ಪ್ರಾಣ ಹಾನಿಗೆ ಮತ್ತು ಬೆಳೆ ಹಾನಿ ಪರಿಹಾರ ಬಾಕಿ ಇದೆ ಎಂದು ತಾವೇ ಹೇಳಿದ್ದೀರಿ. ಇಂತಹ ಪ್ರಕರಣಗಳಲ್ಲಿ ಬಾಕಿ ಇಟ್ಟುಕೊಂಡರೆ ರೈತರಿಗೆ ಹೇಗೆ ಅನುಕೂಲವಾಗುತ್ತದೆ? ಇದನ್ನು ತಾವು ಗಮನಿಸಬೇಕು. ಯಾವಾಗ ದುಡ್ಡು ಕೊಡುತ್ತೀರಿ? 17-1-2007 ರಲ್ಲಿ ಒಂದು ಪರಿಷ್ಕೃತ ಆದೇಶವನ್ನು ಹೊರಡಿಸಿದ್ದೇವೆಂದು ತಾವು ಇಲ್ಲಿ ಹೇಳಿದಿರಿ. ಆ ಆದೇಶದಲ್ಲಿ ಸತ್ತವರಿಗೆ ಎಷ್ಟು? ಗಾಯ ಆದವರಿಗೆ ಎಷ್ಟು? ಬೆಳೆ ಹಾನಿಗೆ ಎಷ್ಟು? ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು. ಹೆಚ್ಚಿಸಿದ್ದರೂ ಕೂಡ ಪರಿಹಾರ ಏನೇನೂ ಸಾಲದು. ಈ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಪರಿಶೀಲನೆ ಮಾಡಿ ಪರಿಹಾರವನ್ನು ಹೆಚ್ಚು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಸನ್ಮಾನ್ಯ ಸಭಾಧ್ಯಕ್ಷರೆ, 20-30 ಆನೆಗಳು ಅಲ್ಲಿರುವುದರಿಂದ ಸಮಸ್ಯೆಗಳು ಉಂಟಾಗಿದೆ ಎಂದು ಅವುಗಳನ್ನು ಸ್ಥಳಾಂತರಿಸಬೇಕೆಂದು ಅವರು ಬೇಡಿಕೆಯನ್ನಿಟ್ಟಿದ್ದಾರೆ. ಸಾಮಾನ್ಯವಾಗಿ ಆನೆಗಳ ಕಾಟ ಅರಣ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯಿಂದ, ಅರಣ್ಯಗಳು ನಾಶವಾಗುತ್ತಿರುವುದರಿಂದ ಗ್ರಾಮಗಳ ಹತ್ತಿರ ಬರುತ್ತಿರುವುದು ನನ್ನ ಅನುಭವಕ್ಕೆ ಬಂದಿದೆ. ನನ್ನ ಕ್ಷೇತ್ರದಲ್ಲಿ 11 ಆನೆಗಳಿದ್ದು ಅದರ ಅನುಭವದಿಂದ ಬಂದಿರುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಆ ಕ್ಷೇತ್ರದಲ್ಲಿ ತಮ್ಮ ಅನುಭವದಿಂದ ಅವರು ಹೇಳಿದ್ದಾರೆ. ಇದನ್ನು ಇಲಾಖಾಧಿಕಾರಿಗಳ ಗಮನಕ್ಕೆ ತಂದು ಆನೆಗಳನ್ನು ಸ್ಥಳಾಂತರಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ. 40 ಲಕ್ಷ ರೂಪಾಯಿ ಪರಿಹಾರದ ಹಣವನ್ನು ಅತಿ ಶೀಘ್ರದಲ್ಲಿಯೇ ಬಿಡುಗಡೆ ಮಾಡಬೇಕೆನ್ನುವ ವಿಚಾರವನ್ನು ಅವರೇನು ಹೇಳಿದ್ದಾರೆ ಅದನ್ನು ಜಿಲ್ಲಾಧಿಕಾರಿಗಳ ಮುಖೇನ ಬಿಡುಗಡೆ ಮಾಡಿಸುವುದಕ್ಕೆ ಕ್ರಮ ಕೈಗೊಳ್ಳಲು ಸೂಚನೆ ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಡಿ. ರೇವಣ್ಣ : ಅತೀ ಶೀಘ್ರವೆಂದರೆ 4 ವರ್ಷವೋ, 5 ವರ್ಷವೋ, 15 ದಿವಸವೋ ಎಂದು ತಾವು ದಯಮಾಡಿ Clarification ಕೊಡಿ.

ಶ್ರೀ ಕೆ. ಜೆ. ಬೋಪಯ್ಯ: ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ನಮ್ಮ ಜಿಲ್ಲೆಯಲ್ಲಿಯೂ ಕೂಡ ಕಾಡಾನೆಗಳ ಹಾವಳಿ ಸಾಕಷ್ಟಿದೆ. ಸುಮಾರು 3 ಸಾವಿರ ಪ್ರಕರಣಗಳಲ್ಲಿ ಇನ್ನೂ ಪರಿಹಾರ ಕೊಟ್ಟಿಲ್ಲ.

ಅಧ್ಯಕ್ಷರು : ಸಾಕು, ಹಾಗೆ ಎಲ್ಲರೂ ಕೇಳುವುದು ಬೇಡ. ಎಲ್ಲರೂ ಪರಿಹಾರದ ಬಗ್ಗೆಯೇ ಒತ್ತಾಯ ಮಾಡುತ್ತಿದ್ದಾರೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಕಾಡಾನೆ ಹಾವಳಿ ಬಗ್ಗೆ ಒಂದು insurance ಏನಾದರೂ ಮಾಡಿದರೆ ಒಳ್ಳೆಯದು. Permanent injury ಆದವರಿಗೆ 25 ಸಾವಿರ ರೂಪಾಯಿ ಕೊಡುವುದಾಗಿ ಹೇಳುತ್ತಾರೆ. ಆದರೆ ಅವರು ಹೇಳಿದಂತೆ spinal cord ಗೆ ಖರ್ಚು ಸುಮಾರು 5 ಲಕ್ಷ ಅಥವಾ 7 ಲಕ್ಷ ರೂಪಾಯಿ ಆಗುತ್ತದೆ. ಆದ್ದರಿಂದ Permanent injury ಆದವರಿಗೆ ಏನಾದರೂ insurance

ಮಾಡಿಸಿದರೆ ಅದರಿಂದ ಹೆಚ್ಚು ಪರಿಹಾರ ಕೊಡಲು ಸಾಧ್ಯವಾಗುತ್ತದೆ. ಆದುದರಿಂದ ಸರ್ಕಾರ ಅದರ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ. ಟಿ. ರವಿ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆ ಮತ್ತು ನನ್ನ ಕ್ಷೇತ್ರದ ಮುತ್ತೋಡಿ ಅಭಯಾರಣ್ಯ ವ್ಯಾಪ್ತಿಯಲ್ಲೂ ಕೂಡ ಕಾಡಾನೆಗಳ ಹಾವಳಿ ಜಾಸ್ತಿ ಇದೆ. ಅಲ್ಲಿರತಕ್ಕಂತಹ DFO ಗೆ ಬೆಳೆ ಪರಿಹಾರ ಕೇಳುವುದಕ್ಕೆ ಹೋದರೆ ಅವರು ಕಾಡಾನೆ ಬರತಕ್ಕತಂಹ ಬೆಳೆಗಳನ್ನು ಏಕೆ ಬೆಳೆಯುತ್ತೀರಿ? ಅಡಿಕೆ ಏಕೆ ಹಾಕುತ್ತೀರಿ ಎಂದು ಅಲ್ಲಿನ ರೈತರಿಗೆ ಪ್ರಶ್ನೆ ಹಾಕುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಆನೆ ಪಾರ್ಕ್ ಮಾಡುವಂತಹ ಒಂದು ಬೇಡಿಕೆಯನ್ನು ತಮ್ಮ ಮುಂದಿಟ್ಟಿದ್ದೇವೆ. ಆನೆಗಳ ಪಾರ್ಕ್ ಮಾಡಿ ಕಾಡಾನೆಗಳನ್ನು ತೆಗೆದುಕೊಂಡು ಅಲ್ಲಿ ಬಿಡತಕ್ಕಂತಹ ಕೆಲಸವನ್ನು ಶ್ರೀಲಂಕಾ ಸರ್ಕಾರವು ಮಾಡುತ್ತಿದೆ. ಆ ರೀತಿ ನಮ್ಮ ರಾಜ್ಯದಲ್ಲೂ ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್. ಕೆ. ಕುಮಾರ ಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಆನೆಗಳನ್ನು ಹಿಡಿಯುವುದನ್ನು ಒಂದು ಆಂದೋಲನವನ್ನಾಗಿ ಮಾಡಬೇಕು. ರಾಜ್ಯ ಸರ್ಕಾರವನ್ನು ಕೇಳಿದರೆ ಕೇಂದ್ರ ಸರ್ಕಾರದ ಮೇಲೆ ಹಾಕುತ್ತಾರೆ. ಕೇಂದ್ರ ಸರ್ಕಾರವನ್ನು ಕೇಳಿದರೆ, ಇಲ್ಲ ರಾಜ್ಯ ಸರ್ಕಾರದವರೇ ಮಾಡುತ್ತಾರೆಂದು ಹೇಳುತ್ತಾರೆ. ಇವರಿಬ್ಬರ ವ್ಯತ್ಯಾಸದಲ್ಲಿ ಪಾಪದ ಜನ ಅಲ್ಲಿ ಸಾಯುತ್ತಿದ್ದಾರೆ. ತಮಗೆ ಹೇಳುವುದಾದರೆ ಅಲ್ಲಿ ಸುಮಾರು 100 ರಿಂದ 400 ಇಂಚು ಮಳೆ ಬೀಳುತ್ತದೆ. ಜನ ಹೊರಗಡೆ ಹೋಗಲು ಸಾಧ್ಯವಾಗುವುದಿಲ್ಲ ಸಂಜೆ 5 ಗಂಟೆ ಮೇಲೆ ಮಕ್ಕಳು ಶಾಲೆಯಿಂದ ಮನೆಗೆ ಬರುವ ಹಾಗಿಲ್ಲ. ಮನೆಯಿಂದ ಶಾಲೆಗೆ ಹೋಗುವುದಕ್ಕೆ ಆಗುವುದಿಲ್ಲ. ಜನ 5 ಗಂಟೆ ಮೇಲೆ ಹೊರಗಡೆ ಹೋಗುವುದಕ್ಕಾಗುವುದಿಲ್ಲ. ಬೆಳಗಿನ ಜಾವ 8 ಗಂಟೆ ಒಳಗೆ ಬರುವುದಕ್ಕಾಗುವುದಿಲ್ಲ. ಆದ್ದರಿಂದ ದಯಮಾಡಿ ರಾಜ್ಯ ಸರ್ಕಾರ ಇದನ್ನು ಒಂದು ಪ್ರತಿಷ್ಠೆಯಾಗಿ ತೆಗೆದುಕೊಂಡು ಆನೆಗಳನ್ನು ಹಿಡಿದು ಸ್ಥಳಾಂತರಿಸುವುದನ್ನು ಕಡ್ಡಾಯವಾಗಿ ಮಾಡಬೇಕು ಹಾಗೂ ಎಷ್ಟು ದಿನಗಳಲ್ಲಿ ಪರಿಹಾರವನ್ನು ಹೆಚ್ಚಿಸುವಿರೆಂದು ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಬಿ. ಸಿ. ಪಾಟೀಲರೆ ಈಗ ಬೇಡ. ಸಮಯ ಆಯಿತು. ಮತ್ತೊಂದು ಸಲ ಮಾತನಾಡುವಿರಂತೆ. ಈಗ ಸಮಯವಿಲ್ಲ. ಇದರ ಬಗ್ಗೆ ಬೇಕಾದಷ್ಟು ಜನರು ಮಾತನಾಡಿದ್ದಾರೆ.

ಶ್ರೀ ಬಿ. ಸಿ. ಪಾಟೀಲ : ಒಂದು ನಿಮಿಷ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು.

ಅಧ್ಯಕ್ಷರು : ಅವರು Specific ಆಗಿ question ಕೇಳಿದ್ದಾರೆ.

ಶ್ರೀ ಬಿ. ಸಿ. ಪಾಟೀಲ : ವನ್ಯ ಪ್ರಾಣಿಗಳ ಬಗ್ಗೆ ಒಂದೇ ಸಾಲಿನಲ್ಲಿ ಹೇಳುತ್ತೇನೆ. ಅವರ ಭಾಗದಲ್ಲಿ ಆನೆಗಳ ಹಾವಳಿ ಜಾಸ್ತಿ ಆದರೆ ನಮ್ಮ ಹಾವೇರಿಯಲ್ಲಿ ಜಿಂಕೆಗಳ ಹಾವಳಿ ಜಾಸ್ತಿಯಾಗಿದೆ. ರಾಣೆಬೆನ್ನೂರು, ಬ್ಯಾಡಗಿ ಹಿರೇಕೆರೂರಿನಲ್ಲಿ ಜಿಂಕೆಗಳು ರೈತರ ಬೆಳೆಗಳನ್ನು ಹಾಳು ಮಾಡುತ್ತಿವೆ.

ಅಧ್ಯಕ್ಷರು : ನೀವು ಈಗ ವಿಷಯಾಂತರ ಮಾಡಬೇಡಿ. ಮಾನ್ಯ ಉದಾಸಿಯವರೇ ತಾವು ಉತ್ತರ ಕೊಡಿ. ನೀವು ಮತ್ತೊಂದು ಪ್ರಶ್ನೆ ಕೇಳಿ. ಈ ರೀತಿ ಸಮಯ ನಷ್ಟಮಾಡಬೇಡಿ.

ಶ್ರೀ ಬಿ. ಸಿ. ಪಾಟೀಲ : ಜಿಂಕೆಗಳು ರೈತರ ಬೆಳೆ ಹಾಳು ಮಾಡುತ್ತಿವೆ.

ಶ್ರೀ ಸಿ. ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿ ಅವರು ಕೇಳಿದಂತಹ ಪ್ರಶ್ನೆಗೆ ಪರಿಹಾರ ಶೀಘ್ರವಾಗಿ ಒದಗಿಸಬೇಕೆನ್ನುವುದರ ಜೊತೆಗೆ ಆನೆಗಳನ್ನು ಸ್ಥಳಾಂತರಿಸಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಹಾವಳಿಯನ್ನು ಕಡಿಮೆ ಮಾಡಬೇಕು ಎನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ.

ಅಧ್ಯಕ್ಷರು : ಅಲ್ಲಿ ಯಾರೂ ಪರಸ್ಪರ ಮಾತನಾಡಬೇಡಿ.

ಶ್ರೀ ಸಿ. ಎಂ. ಉದಾಸಿ : ರೇವಣ್ಣನವರು ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರು ಭರವಸೆಗಳನ್ನು ಹೇಗೆ ಕೊಟ್ಟಿದ್ದಾರೆಂದು ಅವರಿಂದ ನಾವೆಲ್ಲರೂ ಕಲಿತಿದ್ದೇವೆ. ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ನಾನು ಇಷ್ಟಪಡುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ಬೇಕಾದರೆ ಅದಕ್ಕೂ ಒಂದು ದಿವಸ ಚರ್ಚೆ ಇಡಿ. ನಮ್ಮ ಅಭ್ಯಂತರವಿಲ್ಲ.

ಶ್ರೀ ಸಿ. ಎಂ. ಉದಾಸಿ : ನಿಮ್ಮಿಂದ ಅದನ್ನು ಕಲಿತಿದ್ದೇನೆಂದು ಹೇಳಿದೆ ಅಷ್ಟೆ. ನಾನೇನು ಅಗೌರವವಾಗಿ ಮಾತನಾಡಿಲ್ಲ. ಅದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅದು ಗಂಭೀರವಾದ ವಿಷಯ. ನನ್ನ ಕ್ಷೇತ್ರದಲ್ಲೂ ಇಂತಹ ಸಮಸ್ಯೆಗಳು ಬಂದಿವೆ. ಅನೇಕ ಸದಸ್ಯರು ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿಯೂ ಇಂತಹ ಸಮಸ್ಯೆಗಳು ಬಂದಿರುವುದಾಗಿ ಪ್ರಸ್ತಾಪ ಮಾಡಿದ್ದಾರೆ. ಅರಣ್ಯ ನಾಶದ ಪರಿಣಾಮವಾಗಿ ಆನೆಗಳ ಸಂಖ್ಯೆ ನಗರದ ವ್ಯಾಪ್ತಿಯಲ್ಲಿ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಏನಾದರೂ ಪರಿಹಾರವನ್ನು ಕಂಡುಹಿಡಿಯಬೇಕೆಂದು ಸೂಕ್ತವಾದ ಸಲಹೆಯನ್ನು ಅವರು ಕೊಡುತ್ತಿದ್ದಾರೆ. ಆನೆಗಳನ್ನು ಸ್ಥಳಾಂತರಿಸುವಂತೆ ಇಲಾಖಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಪ್ಪಚ್ಚು ರಂಜನ್‌ರವರು insurance ಮಾಡಿಸುವ ಬಗ್ಗೆ ಪ್ರಸ್ತಾಪ ಮಾಡಿದರು. ಅದನ್ನು ಪ್ರಯತ್ನ ಮಾಡಿ.

ಶ್ರೀ ಸಿ. ಎಂ. ಉದಾಸಿ : ನನಗೆ ತಿಳಿದ ಮಟ್ಟಿಗೆ ಅದು ಮಾಡಲು ಬರುವುದಿಲ್ಲ ಎಂಬುದನ್ನು ನನ್ನ ವಿವೇಚನೆಯಿಂದ ಹೇಳುತ್ತಿದ್ದೇನೆ. ಆದರೂ ಅವರ ಸಲಹೆಯನ್ನು ಇಲಾಖಾಧಿಕಾರಿಗಳಿಗೆ ಸೂಚನೆ ಮಾಡಲು ಪ್ರಯತ್ನಮಾಡುತ್ತೇನೆ. ಮಾನ್ಯ ಕುಮಾರ ಸ್ವಾಮಿ ಅವರ ಗಮನಕ್ಕೆ ತರುವಂತಹದ್ದು ಏನೆಂದರೆ ಈ ಪರಿಹಾರ ಕೊಡಬೇಕಾದಾಗ ಜಿಲ್ಲಾಧಿಕಾರಿಗಳು ಪರಿಹಾರವನ್ನು ಕೊಟ್ಟು ಅರಣ್ಯ ಇಲಾಖೆಯಿಂದ ಅದನ್ನು ವಾಪಸ್ಸು ಪಡೆಯುವುದಕ್ಕೆ ಸಾಧ್ಯವಿದೆ. ಅದಕ್ಕೆ ನಿರ್ದಿಷ್ಟವಾದ ಸೂಚನೆಯನ್ನು ಕಳುಹಿಸಿ ಬೇಗ ಪರಿಹಾರ ದೊರೆಯುವಂತೆ ಮಾಡುತ್ತೇನೆ. ಆದರೂ 3-6 ತಿಂಗಳು ಎಂದು ಹೇಳುವುದಿಲ್ಲ. ಅತಿ ಶೀಘ್ರದಲ್ಲಿ ಹಣ ಬಿಡುಗಡೆ ಮಾಡಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.